Form No.4 (Civil)
Deposition
Sheets
(R.P.No.57)

# ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ

## ಸ್ಪೆಷಲ್.ಸಿ. ಸಂಖ್ಯೆ: 41/2016

ಪ್ರಾ.ಸಾ. 1 ಚಾ.ಸಾ. 1

| | | |
|---|---|---|
| ಹೆಸರು | : | ರಂಗಪ್ಪ |
| ತಂದೆಯ ಹೆಸರು | : | ಭೀಮಪ್ಪ ಸೂಗೂರ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ಎಲ್.ಐ.ಸಿ. ಎಜೆಂಟ |
| ವಾಸ | : | ಚಿಕ್ಕನಳ್ಳಿ |

ಪ್ರಮಾಣ ವಚನ ಭೋಧಿಸಿದ ದಿನಾಂಕ: 12-01-2024
ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು ಸಮಾಜ ಸೇವೆ ಕೆಲಸ ಮಾಡುತ್ತೇನೆ. ನಮ್ಮ ಊರಿನ ತಿಮ್ಮಯ್ಯ ತಂದೆ ಮಲ್ಲಯ್ಯ ಅವರು ಸ್ವಂತ ಜಮೀನು ಸರ್ವೆ ನಂ. 184/ಆ 2 ಎಕರೆ 13 ಗುಂಟೆ ಜಮೀನನ್ನು ಸುಮಾರು 4 ವರ್ಷಗಳ ಹಿಂದೆ ಲಕ್ಷ್ಮಿಬಾಯಿ ಗಂಡ ಲಿಂಗಪ್ಪ ಯಾದವ ಖರೀದಿ ಮಾಡಿದ್ದರು. ಆದಕಾರಣ ಲಕ್ಷ್ಮಿಗಾಯಿ ಗಂಡನಾದ ನಿಂಗಪ್ಪ ಅವರು ಬಂದು ನಾನು ಅನಕ್ಷರಸ್ತನಿದ್ದೇನೆ ಹೊಲದ 11-ಇ ನಕ್ಷೆ ಮಾಡಿಸಿಕೊಡಿ ಎಂದು ನನ್ನನ್ನು ಕೇಳಿದರು. ಆ ಕಾರಣ ನಾನು ತಿಮ್ಮಯ್ಯ ತಂದೆ ಮಲ್ಲಯ್ಯ ಅವರಿಂದ 11-ಇ ನಕ್ಷೆಗಾಗಿ ಅರ್ಜಿಯನ್ನು ಹಾಕಿಸಿದೆ. ಆ ಅರ್ಜಿ ಸರ್ವೆಯರ ಮಾಳಪ್ಪ ಅವರಿಗೆ ಅಲಾಟ ಆಗಿತ್ತು. ಆ ಅರ್ಜಿ ಕೊಡುವಾಗ ನನ್ನ ಮೊಬೈಲ ನಂಬರ ಕೊಟ್ಟಿದ್ದು ಅವರ ಮೋಬೈಲ ನಂ. 8497827595 ಅದರಿಂದ ನನ್ನ ಮೊಬೈಲ ನಂ. 9480175308 ಕ್ಕೆ ಕರೆ ಮಾಡಿ ತಿಮ್ಮಯ್ಯ ಅವರು ಹೊಲದ 11-ಇ ನಕ್ಷೆ ಮಾಡಲು ಅರ್ಜಿ ಹಾಕಿದ್ದು ಅದು ನನಗೆ ಅಲಾಟ ಆಗಿದ್ದು ನಾನು ಸರ್ವೆ ಮಾಡಲು ಬರುತ್ತೇನೆ ಎಂದು ಕಾಲ ಮಾಡಿದರು. 20 ದಿನಗಳ ನಂತರ ಜಮೀನಿನ ಸರ್ವೆಗೆ ಬಂದು ಹೊಲ ಸರ್ವೆ ಮಾಡಿಕೊಂಡು ಖರೀದಿಗೆ ಕೊಟ್ಟವರು ಮತ್ತು ಖರೀದಿ ಪಡೆದುಕೊಂಡವರು ಮತ್ತು ಇತರೆ ಸಾಕ್ಷಿದಾರರ ಸಹಿಗಳನ್ನು ಪಡೆದುಕೊಂಡು ಹೋದರು. ಒಂದು ವಾರದ ನಂತರ ನನಗೆ ಪುನಃ ಫೋನ್ ಮಾಡಿದರು ನಿನ್ನ ಪೈಲ್ ಹಾಗೆ ಉಳಿದಿದೆ ನೀನು ಬಂದು ಬೇಟಿಯಾಗಿಲ್ಲ ಆದಷ್ಟು ಬೇಗ ನಿಮ್ಮ ಕೆಲಸ ಮಾಡಿಕೊಂಡು ಹೋಗಬೇಕು ಎಂದು ಹೇಳಿದರು. ನಾನು ಮುಖಾಮುಖಿಯಾಗಿ ಬೇಟಿಯಾಗಲು ಹೋದಾಗ ಆರೋಪಿ ನಿವು ಕೊಡಬೇಕಾದ 7,000/- ರೂಪಾಯಿ ಇನ್ನು ಬಂದಿಲ್ಲ, ಎ.ಡಿ.ಎಲ್.ಆರ್. ಮತ್ತು ಅಲ್ಲಿ ಇಲ್ಲಿ ಹಣ ಕೊಡಬೇಕಾಗುತ್ತದೆ ಆದಷ್ಟು ಬೇಗ ನಿಮ್ಮ ಕೆಲಸವನ್ನು ಹಣ ಕೊಟ್ಟು ಮಾಡಿಕೊಂಡು ಹೋಗಿ ಎಂದು ಹೇಳಿದರು. ನಾನು ಪುನಃ ಊರಿಗೆ ಹೊರಟು ಹೋದೆ. ನನಗೆ ಲಂಚದ

ಹಣ ಕೊಡಲು ಮನಸು ಇಲ್ಲದ ಕಾರಣ ಮರು ದಿನ ಅಂದರೆ ದಿನಾಂಕಃ 24-02-2015 ರಂದು ಲೋಕಾಯುಕ್ತ ಕಛೇರಿಗೆ ಹೋದೆ. ಅಲ್ಲಿ ಪಿ.ಐ. ರವರು ನಮ್ಮನ್ನು ಕರೆದು ಯಾಕೆ ಬಂದಿದ್ದಿರಿ ಎಂದು ಕೇಳಿದರು. ಆಗ ನಾನು ಸರ್ವೆಯರ್ ಅವರು ಹಣ ಕೇಳುತ್ತಿದ್ದಾರೆ ನನಗೆ ಕೊಡಲು ಮನಸ್ಸು ಇಲ್ಲ ಆ ಕಾರಣ ನಿಮ್ಮಲ್ಲಿ ಬಂದಿದ್ದೇನೆ ಎಂದು ಹೇಳಿದೆ. ಅವರು ನನಗೆ ಒಂದು ವೈಸ್ ರೀಕಾರ್ಡ ಕೊಟ್ಟು, ವೈಸ್ ರೀಕಾರ್ಡರನ್ನು ಚಾಲು ಇಟ್ಟುಕೊಂಡು ಅವರ ಜೊತೆ ಏನು ಮಾತನಾಡುತ್ತಿರಾ ಅದನ್ನು ರೀಕಾರ್ಡ ಮಾಡಿಕೊಂಡು ಬನ್ನಿ ಎಂದು ಕಳುಹಿಸಿದರು. ಅದೇ ದಿನ ನಾನು ಸುರಪೂರಕ್ಕೆ ಹೋದೆ. ಅಲ್ಲಿ ಆರೋಪಿಯನ್ನು ಅವರ ರೂಮನಲ್ಲಿ ಬೇಟಿಯಾಗಿದ್ದೆ. ನೀವು ಕೇಳಿದ ಹಣ ಜಾಸ್ತಿಯಾಗುತ್ತದೆ ಅವರು ಬಡವರಿದ್ದಾರೆ ಅದಷ್ಟು ಕಡಿಮೆ ಮಾಡಿ ಎಂದು ಕೇಳಿದೆ. ಆಗ ಅವರು ಅಲ್ಲಿ ಇಲ್ಲಿ ಕೊಡಲು ಕಡಿಮೇ ಎಂದರೂ 5-6 ಸಾವಿರ ರೂಪಾಯಿ ಆಗುತ್ತದೆ ಅದಕ್ಕಿಂತ ಕಡಿಮೇ ಆಗುವುದಿಲ್ಲ ಎಂದು ಹೇಳಿದರು. ಆಗ ನಾನು 5,000/- ರೂಪಾಯಿ ಕೊಡಲು ಒಪ್ಪಿಕೊಂಡೆ. ಅದೇ ದಿನ ನಾನು 2,000/- ರೂಪಾಯಿ ಅವರಿಗೆ ನೀಡಿದೆ. ಉಳಿದ 3,000/- ರೂಪಾಯಿಗಳನ್ನು ಯಾವಾಗ ಕೊಡುತ್ತಿರಾ ಎಂದು ಕೇಳಿದರು. ನಾನು ಶನಿವಾರ ಬಂದು ಕೊಡುತ್ತೇನೆ ಎಂದು ಹೇಳಿದರು. ಅವರು ಮತ್ತೆ ಫೋನ್ ಮಾಡಬೇಡ ಆದಷ್ಟು ಬೇಗ ಹಣ ತಂದು ಕೊಟ್ಟು ನಿಮ್ಮ ಕೆಲಸ ಮಾಡಿಕೊಂಡು ಹೋಗಿ ಎಂದು ಹೇಳಿದರು. ಪುನಃ ನಾನು ಊರಿಗೆ ಹೋದೆ.

2. ಮರು ದಿನ ದಿನಾಂಕಃ 28-02-2015 ಎಂದು ಹೇಳಿ ನಂತರ ಶನಿವಾರ 28-02-2015 ರಂದು ಪುನಃ ನಾನು ಲೋಕಾಯುಕ್ತ ಕಛೇರಿಗೆ ಬೆಳಿಗ್ಗೆ 11-00 ಗಂಟೆಗೆ ಹೋದೆ. ಅಲ್ಲಿದ್ದ ಪಿ.ಐ. ಮತ್ತು ಸಿಬ್ಬಂದಿಯವರನ್ನು ಬೇಟಿಯಾದೆ. ನನ್ನಲ್ಲಿದ್ದ ವೈಸ ರೀಕಾರ್ಡರನ್ನು ಅವರಿಗೆ ಕೊಟ್ಟೆ, ಅವರು ಸಂಭಾಷಣೆಯನ್ನು ಕೇಳಿ ಲಿಖಿತ ದೂರನ್ನು ಪಡೆದುಕೊಂಡರು. ಅದನ್ನು ನಿ.ಪಿ.1 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ನಂತರ ಪ್ರ.ವ.ವರದಿ ಮಾಡಿದ್ದು ಅದನ್ನು ನಿ.ಪಿ.2 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.2(ಎ) ಎಂದು ಗುರುತಿಸಲಾಯಿತು. ನಂತರ ಲೋಕಾಯುಕ್ತ ಪಿ.ಐ. ರವರು ನೆರಳು ಸಾಕ್ಷಿದಾರರನ್ನು ಕರೆಯಿಸಿದರು. ಎನ್. ಬಸವರಾಜ ಮತ್ತು ಪ್ರವೀಣಕುಮಾರ ಎಂಬ ಸಾಕ್ಷಿಗಳು ಬಂದರು. ಪಿ.ಐ. ರವರು ನನಗೆ ಬೇಟಿ ಮಾಡಿಸಿದರು. ವೈಸ ರೀಕಾರ್ಡನ್ನು ಪುನಃ ಅವರು ಕೇಳಿಸಿಕೊಂಡು ಬರೆದುಕೊಂಡುರು. ಅಲ್ಲಿ ಫೋಟೊಗಳನ್ನು ತೆಗೆದರು. ದೂರಿನ ವಿಷಯವನ್ನು ಅವರುಗಳ ಮುಂದೆ ಹೇಳಿದೆ. ಪಂಚರು ಹಣವನ್ನು ತಂದಿದ್ದಿಯಾ ಎಂದು ಕೇಳಿದರು. ವೀಡಿಯೋ ಮಾಡಿ ಸಿ.ಡಿ. ಮಾಡಿ ಅದನ್ನು ಜೆ.ಬಿ. ಎಂದು ಸೀಲ ಹಾಕಿದರು. ಪಿ.ಐ. ರವರು ಹಣ ತಂದಿದ್ದಿಯಾ ಎಂದು ಕೇಳಿದರು. ನಾನು ಹಣ ತಂದಿದ್ದೇನೆ ಎಂದು ಹೇಳಿದೆ. ನಾನು 500/- ರೂಪಾಯಿ ಮುಖ ಬೆಲೆಯ 6 ನೋಟುಗಳನ್ನು ತಂದಿದ್ದೇನೆ ಎಂದು ಹೇಳಿದೆನು. ಆ ಹಣವನ್ನು ಎನ್. ಬಸವರಾಜ ಪಂಚ ಸಾಕ್ಷಿ ಕೈಯಲ್ಲಿ ಕೊಟ್ಟೆ ನೋಟ ನಂಬರನ್ನು ಬಸವರಾಜ ಅವರು ಪ್ರಮೀಣ ಅವರಿಗೆ ಹೇಳಿದ್ದು ಅವರು ಬರೆದುಕೊಂಡರು. ಆ ನೋಟುಗಳು ಫ್ರಾಪರಟಿ ಬಾಕ್ಸ ನಿಂದ ತರಿಸಿದ್ದು ನ್ಯಾಯಾಲಯದಲ್ಲಿ

(ಸೀಲ ಕವರನ್ನು ಅನುಮತಿಯ ಮೇರೆಗೆ ಓಪನ ಮಾಡಲಾಯಿತು) ಅದರಲ್ಲಿ 500/- ರೂಪಾಯಿ ಮುಖ ಬೆಲೆಯ 6 ನೋಟುಗಳು ಇದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು. ಪಿನಾಪ್ತಲಿನ ಪೌಡರ ಮತ್ತು ಸೋಡಿಯಂ ಕಾರ್ಬೋನೇಟ ಪೌಡರ ತಂದರು ಸಿಬ್ಬಂದಿಯವರಿಂದ ನೋಟುಗಳ ಮೇಲೆ ಪಿನಾಪ್ತಲಿನ ಪೌಡರ ಸವರಿಸಿದಾಗ ಆ ನೋಟುಗಳನ್ನು ಪಂಚ ಸಾಕ್ಷಿ ಬಸವರಾಜ ಅವರ ಕೈಯಲ್ಲಿ ಕೊಟ್ಟರು. ನನ್ನ ಶರ್ಟ ಜೇಬಿನಲ್ಲಿ ಏನೂ ಇಲ್ಲ ಎಂದು ಖಾತ್ರಿ ಪಡಿಸಿಕೊಂಡು ಆ ಹಣವನ್ನು ನನ್ನ ಶರ್ಟನ ಎಡ ಜೇಬಿನಲ್ಲಿ ಎನ್. ಬಸವರಾಜ ಅವರು ಇಟ್ಟರು. ಎರಡು ಗಾಜಿನ ಬಟ್ಟಲುಗಳನ್ನು ತರಸಿದರು. ಪೌಡರ ಹಚ್ಚಿದ್ದ ಕೈಗಳನ್ನು ಶುದ್ಧ ನೀರಿನಿಂದ ತೋಳೆಸಿದರು. ಆ ಬಟ್ಟಲಿನ ದ್ರಾವಣ ಗುಲಾಬಿ ಬಣ್ಣಕ್ಕೆ ತಿರುಗಿತ್ತು. ನೋಟು ಎಣಿಸಿದ ಬಸವರಾಜ ಅವರ ಕೈ ಬೆರಳುಗಳನ್ನು ತೋಳೆದರು. ಸದರಿ ನೀರು ಗುಲಾಬಿ ಬಣ್ಣಕ್ಕೆ ತಿರುಗಿತ್ತು ಆ ನೀರನ್ನು ಬಾಟಲಿಗಳಲ್ಲಿ ಹಾಕಿ ಸೀಲ್ ಮಾಡಿ ಜೆ.ಬಿ. ಎಂದು ಅಕ್ಷರದಿಂದ ಸೀಲ್ ಮಾಡಿದ್ದು ಅದು ಆರ್ಟಿಕಲ್-2 ಎಂದು ಗುರುತಿಸಲಾಯಿತು. ಅದನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.2 ಎಂದು ಗುರುತಿಸಲಾಯಿತು. ಆ ನೋಟುಗಳನ್ನು ಮುಟ್ಟಿದರೆ ಆರೋಪಿಯ ಕೈ ಬೆರಳುಗಳು ತೊಳೆದಾಗ ಗುಲಾಬಿ ಬಣ್ಣಕ್ಕೆ ತಿರುಗುತ್ತದೆ ಎಂದು ಹೇಳಿದರು. ಆರೋಪಿ ಹಣ ಕೇಳಿದಲ್ಲಿ ಆತನ ಕೈಯಲ್ಲಿ ಕೊಡಬೇಕು, ಇಲ್ಲದಿದ್ದರೆ ಯಾರಿಗೆ ಹೇಳುತ್ತಾನೋ ಅವರಿಗೆ ಕೊಡುವಂತೆ ತಿಳುವಳಿಕೆ ಹೇಳಿದರು. ನಾವು ಹೊರಗಡೆ ಇರುತ್ತೇವೆ ನೀನು ಹಣ ಕೊಟ್ಟ ನಂತರ ಮುಖದಲ್ಲಿ ಬೆವರು ವರಸಿಕೊಳ್ಳುವಂತೆ ಸೂಚನೆ ಕೊಡುವಂತೆ ಹೇಳಿದರು. ನೀವು ಹೋದಾಗ ವೈಸ ರೀಕಾರ್ಡರನ್ನು ಚಾಲು ಮಾಡಿಕೊಂಡು ಸಂಭಾಷಣೆ ದಾಖಲಿಸಿಕೊಳ್ಳುವಂತೆ ಹೇಳಿದರು. ಎನ್. ಬಸವರಾಜ ನನ್ನ ಜೊತೆ ಬಂದು ಆತನನ್ನು ಸಾಕ್ಷಿಯಾಗಿ ಗಮನಿಸುವಂತೆ ಹೇಳಿದರು. ಆ ಸ್ಥಳದಲ್ಲಿ ಫೋಟೊಗಳನ್ನು ತೆಗೆದರು. ಒಟ್ಟು 15 ಫೋಟೊಗಳನ್ನು ನಿ.ಪಿ.3 ರಿಂದ 17 ಎಂದು ಗುರುತಿಸಲಾಯಿತು. ಸಾಕ್ಷಿ ತನ್ನ ಕೈಯಲ್ಲಿ ಏನೋ ಬರೆದುಕೊಂಡಿದ್ದು ಅದನ್ನು ನೋಡಿ ಹೇಳಿರುತ್ತಾರೆ. ಸದರಿ ಮಹಜರನ್ನು 11-45 ರಿಂದ 12-45ರ ವರೆಗೆ ಮಾಡಿರುತ್ತಾರೆ. ಸದರಿ ಮಹಜರನ್ನು ನಿ.ಪಿ.18 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.18(ಎ) ಎಂದು ಗುರುತಿಸಲಾಯಿತು.

ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಗಾಗಿ ಸಮಯಕೋರಿದ್ದು ಸಮಯವನ್ನು ಕೊಡಲಾಯಿತು.

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಯಾದಗಿರಿ.